**2013 ರ ಕರ್ನಾಟಕ ಅಧಿನಿಯಮ ಸಂಖ್ಯೆ 37**

# ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013

## ಪ್ರಕರಣಗಳ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

ಅಧ್ಯಾಯ - I
ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

ಅಧ್ಯಾಯ - II
ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ರಚನೆ ಮತ್ತು ಅದರ ಉದ್ಯೋಗಿಗಳು

3. ಪ್ರಾಧಿಕಾರದ ರಚನೆ
4. ಪದಾವಧಿ ಮತ್ತು ಸೇವಾ ಷರತ್ತುಗಳು
5. ಸದಸ್ಯತ್ವಕ್ಕೆ ಅನರ್ಹತೆಗಳು
6. ಸದಸ್ಯನನ್ನು ತೆಗೆದು ಹಾಕುವುದು
7. ಮರು ನೇಮಕಾತಿಗೆ ಅರ್ಹತೆ
8. ಪ್ರಾಧಿಕಾರದ ಅಧಿಕಾರಗಳು
9. ಪ್ರಾಧಿಕಾರದ ಉಪ-ಸಮಿತಿ
10. ಕಾರ್ಯದರ್ಶಿಯ ನೇಮಕಾತಿ
11. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು
12. ಪ್ರಾಧಿಕಾರದ ನೌಕರರು
13. ಪ್ರಾಧಿಕಾರದ ಅಡಿಯಲ್ಲಿನ ಸೇವೆಗೆ ಸಾಮಾನ್ಯ ಅನರ್ಹತೆಗಳು
14. ಪ್ರಾಧಿಕಾರದ ಸಭೆಗಳು
15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಊರ್ಜಿತವಾದುದೆಂದು ಪೂರ್ವಭಾವನೆ ಮಾಡುವುದು
16. ಸುತ್ತೋಲೆಯ ಮೂಲಕ ಪ್ರಾಧಿಕಾರದ ತೀರ್ಮಾನಗಳನ್ನು ಸೂಚಿಸುವುದು
17. ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷರ ಅಧಿಕಾರ

ಅಧ್ಯಾಯ – III
ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆ

18. ದೇವಸ್ಥಾನದ ಚರ ಮತ್ತು ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದ ಉಪಬಂಧ
19. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು
20. ಪೂರಕ ಅಭಿವೃದ್ಧಿ ಕಾರ್ಯಗಳು
21. ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ನಿರ್ವಹಣೆ

22. ಅಧಿಕಾರಗಳ ಪ್ರತ್ಯಾಯೋಜನೆ

23. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರದ ಆವರಣಕ್ಕೆ ಅನ್ವಯಿಸುವುದು

ಅಧ್ಯಾಯ – IV
ಹಣಕಾಸು ಮತ್ತು ಸ್ವತ್ತು

24. ಪ್ರಾಧಿಕಾರದ ನಿಧಿ

25. ನಿಧಿಯ ಬಳಕೆ

26. ಸರ್ಕಾರದಿಂದ ಅನುದಾನ

27. ಪ್ರಾಧಿಕಾರದ ಆಯವ್ಯಯ

28. ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ

29. ವರದಿಗಳು

ಅಧ್ಯಾಯ – V
ಸಂಕೀರ್ಣ ವಿಷಯಗಳು

30. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರತಕ್ಕದ್ದು

31. ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

32. ಕರ್ತವ್ಯ ನಿರ್ವಹಣೆಯಲ್ಲಿ ಲೋಪ

33. ಪ್ರಾಧಿಕಾರದ ವಿಘಟನೆ

34. ರಾಜ್ಯ ಸರ್ಕಾರದ ನಿಯಂತ್ರಣ

35. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ

36. ತೊಂದರೆಗಳ ನಿವಾರಣೆ.

37. ನಿಯಮಗಳ ರಚನಾಧಿಕಾರ

38. ವಿನಿಯಮಗಳ ರಚನಾಧಿಕಾರ

39. ಅಧಿನಿಯಮದ ಅಧ್ಯಾರೋಹಿ ಪರಿಣಾಮ

40. ಪ್ರಾಧಿಕಾರದ ರಚನೆಯ ಪರಿಣಾಮಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**2013ರ ಅಧಿನಿಯಮ ಸಂಖ್ಯೆ 37.–** ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಲು ಸ್ವತಂತ್ರ ಶಾಸನಬದ್ಧ ಪ್ರಾಧಿಕಾರದ ರಚನೆಗಾಗಿ ಉಪಬಂಧವನ್ನು ಕಲ್ಪಿಸಲು ಒಂದು ಶಾಸನವನ್ನು ಅಧಿನಿಯಮಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಸದರಿ ವಿಧೇಯಕದ ಪ್ರಮುಖ ಲಕ್ಷಣಗಳು ಈ ಮುಂದಿನಂತಿವೆ,–

(1) ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಡಿಯಲ್ಲಿ, ಸಂಬಂಧಪಟ್ಟ ಸಚಿವರು, ಸಂಸತ್ ಸದಸ್ಯರು, ಶಾಸಕರು, ಸರ್ಕಾರೇತರ ವ್ಯಕ್ತಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಸದಸ್ಯರಾಗಿರುವಂತೆ ಒಂದು ಪ್ರಾಧಿಕಾರದ ರಚನೆ;
(2) ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿಗಳಾಗಿರತಕ್ಕ ಕಾರ್ಯದರ್ಶಿಯ ನೇಮಕಾತಿ;
(3) ಪ್ರಾಧಿಕಾರವು ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರದ ಅಭಿವೃದ್ಧಿ ಮತ್ತು ಆ ಮೂಲಕ ಅವರ ನಿರ್ವಹಣೆಗೆ ಸಂಬಂಧಿಸಿದ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು;

(4) ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ನಿಧಿ ಎಂದು ಕರೆಯಲ್ಪಡುವ ಒಂದು ನಿಧಿಯ ರಚನೆ;

(5) ನಿಧಿಯ ಅನ್ವಯ;

(6) ಇತರ ಪ್ರಾಸಂಗಿಕ ವಿಷಯಗಳು;

ಆದ್ದರಿಂದ, ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:10, ಕಡತ ಸಂಖ್ಯೆ:ಸಂವ್ಯಶಾಇ 06 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಹಾಗೂ 32 ಮತ್ತು 3ನೇ ಪಟ್ಟಿಯ 20 ಹಾಗೂ 40ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

II

**2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 36.–** ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ ಪ್ರದೇಶದ, ಮಹದೇಶ್ವರ ಬೆಟ್ಟಗಳ ಸಮಗ್ರ ಅಭಿವೃದ್ಧಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ಅಧಿನಿಯಮಿಸಲಾಗಿದೆ. ಸದರಿ ಪ್ರಾಧಿಕಾರವು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ, ಅಧಿನಿಯಮದ ಕೆಲವು ಉಪಬಂಧಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2014ರ ವಿಧಾನಸಭೆಯ ವಿಧೇಯಕ ಸಂಖ್ಯೆ50:, ಕಡತ ಸಂಖ್ಯೆ:ಸಂವ್ಯಶಾಇ 21 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 32ನೆಯ ಹಾಗೂ 3ನೇ ಪಟ್ಟಿಯ 20 ಮತ್ತು 40ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

III

**2016ರ ಅಧಿನಿಯಮ ಸಂಖ್ಯೆ 15.–** ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 37),–

(i) ಕರ್ನಾಟಕ ವಿಧಾನ ಸಭಾ ಸದಸ್ಯರನ್ನು ಒಳಗೊಂಡಂತೆ, ರಾಜ್ಯ ಸರ್ಕಾರವು 2ಕ್ಕಿಂತ ಹೆಚ್ಚಿಲ್ಲದಂತೆ, ಕರ್ನಾಟಕ ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ಪ್ರಾಧಿಕಾರದ ಸದಸುರುಗಳನ್ನಾಗಿ ನಾಮನಿರ್ದೇಶಿಸುವುದಕ್ಕಾಗಿ; ಮತ್ತು

(ii) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರಗಳನು ಕಲ್ಪಿಸುವುದಕ್ಕಾಗಿ;

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ 07, ಕಡತ ಸಂಖ್ಯೆ:ಸಂವ್ಯಶಾಇ 58 ಶಾಸನ 2016)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 32ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

---

**2013 ರ ಕರ್ನಾಟಕ ಅಧಿನಿಯಮ ಸಂಖ್ಯೆ 37**

(2013ರ ಮಾರ್ಚ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013**

(2013ರ ಮಾರ್ಚ್ ಹದಿಮೂರನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

(2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 36 ಮತ್ತು 2016ರ 15ರಲ್ಲಿ ತಿದ್ದುಪಡಿಯಾದಂತೆ.)

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೈಮಹದೇಶ್ವರಸ್ವಾಮಿ ದೇವಸ್ಥಾನ, ಮಹದೇಶ್ವರ ಬೆಟ್ಟಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೈಮಹದೇಶ್ವರಸ್ವಾಮಿ ದೇವಸ್ಥಾನ, ಮಹದೇಶ್ವರ ಬೆಟ್ಟಗಳನ್ನು ಅಂತರರಾಷ್ಟ್ರೀಯ ಯಾತ್ರಾ ಸ್ಥಳವಾಗಿ, ಸಾಂಸ್ಕೃತಿಕ ಮತ್ತು ಪ್ರವಾಸ ಕೇಂದ್ರವಾಗಿ ಅಭಿವೃದ್ಧಿಗೊಳಿಸಲು ಮತ್ತು ಅದನ್ನು ನಿರ್ವಹಿಸಿಕೊಂಡು ಬರಲು ಒಂದು ಪ್ರಾಧಿಕಾರದ ಸ್ಥಾಪನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು, 2ನೇ ಪ್ರಕರಣದ (ಎಫ್) ಖಂಡದಲ್ಲಿ ಪರಿಭಾಷಿಸಲಾದಂತೆ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಪ್ರದೇಶಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು. ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

ಅಧಿಸೂಚನೆ ಸಂಖ್ಯೆ: ಕಂಇ 130 ಮುಅಬಿ 2013 ದಿನಾಂಕ: 11.09.2013ರ ಮೂಲಕ ದಿ:11.09.2013ರಿಂದ ಜಾರಿಗೆ ಬಂದಿರುತ್ತದೆ.

(ಅಧಿಸೂಚನೆಯನ್ನು ಅಧಿನಿಯಮದ ಕೊನೆಯಲ್ಲಿ ನೋಡಬಹುದು.)

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸೌಕರ್ಯ" ಎಂಬುದರಲ್ಲಿ ರಸ್ತೆಗಳು, ಬೀದಿಗಳು, ಸುರಂಗ ಮಾರ್ಗಗಳು, ದೀಪವ್ಯವಸ್ಥೆ, ಚರಂಡಿ ವ್ಯವಸ್ಥೆ, ನಿರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲಗಳು; ಲೋಕೋಪಯೋಗಿ ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಅಂಚೆ ಕಚೇರಿ, ಬ್ಯಾಂಕು, ಆಸ್ಪತ್ರೆ, ಚಿಕಿತ್ಸಾಲಯ, ಪೊಲೀಸು ಠಾಣೆ, ನ್ಯಾಯಬೆಲೆ ಅಂಗಡಿ, ಹಾಲಿನ ಕೇಂದ್ರ, ಗ್ರಂಥಾಲಯ, ಮನೋರಂಜನಾ ಕೇಂದ್ರಗಳು, ಪ್ರಾಧಿಕಾರಿಯು ಪ್ರಾಧಿಕೃತಗೊಳಿಸಿದ

ಜನೋಪಯೋಗಿ ಸೇವೆಯ ಯಾವುವೇ ಸೇವಾ ಕೇಂದ್ರಗಳು, ಅಥವಾ ಇತರ ಸೌಲಭ್ಯಗಳು; ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಕರ್ಯಗಳು ಒಳಗೊಳ್ಳುತ್ತವೆ;

(ಬಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ;

(ಸಿ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಡಿ) "ನಿಧಿ" ಎಂದರೆ, ಪ್ರಾಧಿಕಾರದ ನಿಧಿ;

(ಇ) "ಕಾರ್ಯದರ್ಶಿ " ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಪ್ರಾಧಿಕಾರದ ಕಾರ್ಯದರ್ಶಿ;

(ಎಫ್) "ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ" ಎಂದರೆ, ಅದು ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿನ ಕೊಳ್ಳೆಗಾಲ ತಾಲ್ಲೂಕಿನ ಮಲೈ ಮಹದೇಶ್ವರ ಬೆಟ್ಟಗಳಲ್ಲಿ ಅದಕ್ಕೆ ಸೇರಿಕೊಂಡ ಎಲ್ಲಾ ಅಧೀನ ದೇವಸ್ಥಾನಗಳು, ಮಲೈ ಮಹದೇಶ್ವರ ಬೆಟ್ಟಗಳ ಇಡೀ ಪ್ರದೇಶ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರವು ಕಾಲಕಾಲಕ್ಕೆ ಆರ್ಜಿಸಬಹುದಾದ ಭೂ-ಪ್ರದೇಶ ಹಾಗೂ ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರೆ ಪ್ರದೇಶಗಳು ಇವುಗಳನ್ನು ಒಳಗೊಳ್ಳುತ್ತದೆ;

(ಜಿ) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ;

(ಎಚ್) "ವಿನಿಯಮಗಳು" ಎಂದರೆ, 38ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರದ ವಿನಿಯಮಗಳು;

## ಅಧ್ಯಾಯ - II

## ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ರಚನೆ ಮತ್ತು ಅದರ ಉದ್ಯೋಗಿಗಳು

**3. ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೇ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ [1][ಮಲೈ ಮಹದೇಶ್ವರ ಬೆಟ್ಟದಲ್ಲಿ][1] ತನ್ನ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(3) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಮುಖ್ಯಮಂತ್ರಿಗಳು, ಇವರು ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಪ್ರಭಾರದಲ್ಲಿರುವ ಸಚಿವರು, ಇವರು ಪ್ರಾಧಿಕಾರದ ಉಪಾಧ್ಯಕ್ಷರಾಗಿರತಕ್ಕದ್ದು;

(ಸಿ) ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು; [1][ಉಪಾಧ್ಯಕ್ಷರಾಗಿರತಕ್ಕದ್ದು][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಸೇರಿಸಲಾಗಿದೆ.

(ಡಿ) ಶ್ರೀ ಸಾಲೂರು ಮಠದ ಪೀಠಾಧಿಪತಿಗಳು, ಮಲೈ ಮಹದೇಶ್ವರ ಬೆಟ್ಟಗಳು;

(ಇ) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಹಾಗೂ ಅದರ ಎಲ್ಲೆಗಳೊಳಗೆ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನಮಂಡಲದ ಸದಸ್ಯರು;

[1][(ಎಫ್) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಐತಿಹಾಸಿಕ ಹಿನ್ನೆಲೆ ಮತ್ತು ಸ್ಥಳಪುರಾಣದ ಬಗ್ಗೆ ಹೆಚ್ಚಿನ ಪರಿಚಯವಿರುವ ಅತಿ ಗಣ್ಯ ವ್ಯಕ್ತಿಗಳ ಪೈಕಿ ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಐದಕ್ಕೆ ಮೀರದ ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು ಮತ್ತು ಒಬ್ಬರು ಮಹಿಳೆಯಾಗಿರತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(ಜಿ) ಸಂಪರ್ಕ ಮತ್ತು ಕಟ್ಟಡದ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ;

(ಎಚ್) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ; [1][ಅಥವಾ ಅವರ ನಾಮನಿರ್ದೇಶಿತರು][1]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 6.09.2014 ರಿಂದ ಸೇರಿಸಲಾಗಿದೆ.

(ಐ) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯದತ್ತಿಗಳು, ಕಂದಾಯ ಇಲಾಖೆ, ಇದರ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

[1][(ಜೆ) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) ಅಥವಾ ಅವರ ಪ್ರತಿನಿಧಿ;

(ಜೆ–1) ಆಯುಕ್ತರು, ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು;

(ಜೆ–2) ಪ್ರಧಾನ ಅರ್ಚಕರು, ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(ಕೆ) ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ;

(ಎಲ್) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ;

(ಎಂ) ನಿರ್ದೇಶಕರು, ಪುರಾತತ್ವ ಶಾಸ್ತ್ರ ಮತ್ತು ವಸ್ತು ಸಂಗ್ರಹಾಲಗಳ ಇಲಾಖೆ, ಮೈಸೂರು;

(ಎನ್) ಪ್ರಾಧಿಕಾರದ ಕಾರ್ಯದರ್ಶಿ, ಇವರು ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

**4. ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು:

ಪರಂತು, ಶ್ರೀ ಸಾಲೂರು ಮಠದ ಪೀಠಾಧಿಪತಿಗಳು ಶಾಶ್ವತ ಸದಸ್ಯರಾಗಿರತಕ್ಕದ್ದು.

(2) ಯಾವೊಬ್ಬ ಸರ್ಕಾರೇತರ ಸದಸ್ಯನು ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಆದರೆ ತನ್ನ ರಾಜೀನಾಮೆಯು ಅಂಗೀಕಾರವಾಗುವವರೆಗೂ ಪದದಲ್ಲಿ ಮುಂದುವರೆಯತಕ್ಕದ್ದು.

(3) ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸರ್ಕಾರೇತರ ಸದಸ್ಯರು ಪಡೆಯತಕ್ಕದ್ದು.

**5. ಸದಸ್ಯತ್ವಕ್ಕೆ ಅನರ್ಹತೆಗಳು.–** ಒಬ್ಬ ವ್ಯಕ್ತಿಯು,–

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಲಾದ ವ್ಯಕ್ತಿಯಾಗಿದ್ದರೆ ಅಥವಾ ವಜಾ ಮಾಡಲಾದ ವ್ಯಕ್ತಿಯಾಗಿದ್ದರೆ; ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವಯಂ ತಾನೇ ಅಥವಾ ಒಬ್ಬ ಪಾಲುದಾರನ ಅಥವಾ ಏಜೆಂಟನ ಮೂಲಕ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ, ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

-ಅವನು ಸದಸ್ಯನಾಗಿ ನೇಮಕ ಹೊಂದಲು ಅಥವಾ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಿರುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣದ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

**6. ಸದಸ್ಯನನ್ನು ತೆಗೆದು ಹಾಕುವುದು.**- (1) ರಾಜ್ಯ ಸರ್ಕಾರವು ಸದಸ್ಯರೊಬ್ಬರನ್ನು, ಆತನು,-

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟರೆ:

ಪರಂತು ಯಾವ ಸದಸ್ಯರನ್ನೂ, ಆತ ಆ ಪ್ರಕರಣದ (1)ನೇ ಉಪ ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಸದರಿ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದು ಹಾಕತಕ್ಕದ್ದಲ್ಲ; ಅಥವಾ

(ಬಿ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

[1][(ಸಿ) ಪ್ರಾಧಿಕಾರಕ್ಕೆ ಮಾಹಿತಿಯನ್ನು ನೀಡದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ:

ಪರಂತು, ಈ ಖಂಡವು ಪದನಿಮಿತ್ತ ಸದಸ್ಯರಿಗೆ ಅನ್ವಯವಾಗತಕ್ಕದ್ದಲ್ಲ, ಅಥವಾ][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(ಡಿ) ಆತನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವಂತೆ ತನ್ನ ಸ್ಥಾನವನ್ನು ಆತ ದುರುಪಯೋಗಪಡಿಸಿಕೊಳ್ಳುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ,

- ಆತನನ್ನು ಸದಸ್ಯ ಸ್ಥಾನದಿಂದ ತೆಗೆದುಹಾಕತಕ್ಕದ್ದು:

ಪರಂತು, ಯಾವ ಸದಸ್ಯನನ್ನೂ ಆತನಿಗೆ ಸದರಿ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಅಡಿಯಲ್ಲಿ ತೆಗೆದು ಹಾಕತಕ್ಕದ್ದಲ್ಲ.

**7. ಮರು ನೇಮಕಾತಿಗೆ ಅರ್ಹತೆ.-** ಸದಸ್ಯತ್ವ ಕೊನೆಗೊಂಡ ಯಾವೊಬ್ಬ ವ್ಯಕ್ತಿಯು, 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗೊಳಗಾಗಿದ್ದಾಗ ಹೊರತು, ಸದಸ್ಯನಾಗಿ ಮರುನೇಮಕ ಹೊಂದಲು ಅರ್ಹನಾಗಿರತಕ್ಕದ್ದು.

**8. ಪ್ರಾಧಿಕಾರದ ಅಧಿಕಾರಗಳು.-** (1) ಇತರ ಯಾವುದೇ ಪ್ರಾಧಿಕಾರದ ಮೂಲಕ ನೆರವೇರಿಸಬೇಕೆಂದು ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ತಿಳಿಸಿದ ಅಂಥ ಯಾವುದೇ ಕಾರ್ಯವನ್ನು ನೆರವೇರಿಸುವುದನ್ನು ಹೊರತುಪಡಿಸಿ, ಪ್ರಾಧಿಕಾರವು, ಈ ಅಧಿನಿಯಮದ ಆಶಯಗಳು ಮತ್ತು ಉಪಬಂಧಗಳನ್ನು ಜಾರಿಗೆ ತರಲು ತಾನು ಅವಶ್ಯವೆಂದು ಅಭಿಪ್ರಾಯ ಪಡುವಂಥ ಯಾವುವೇ ಕಾರ್ಯಗಳನ್ನು ಮಾಡಲು ಸಾಮಾನ್ಯವಾಗಿ ಅಧಿಕಾರ ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು,-

(ಎ) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಯಾವುದೇ ಉದ್ದೇಶವನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ತಾನು ಪರಿಗಣಿಸುವಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಪರವಾಗಿ ಕಾರ್ಯದರ್ಶಿಯು ಮಾಡಿಕೊಳ್ಳತಕ್ಕದ್ದು:

[1][ಪರಂತು, ಹತ್ತು ಲಕ್ಷ ರೂಪಾಯಿಗಳ ಅಥವಾ ಅದಕ್ಕೂ ಹೆಚ್ಚಿನ ವೆಚ್ಚವನ್ನೊಳಗೊಂಡ ಪ್ರತಿಯೊಂದು ಕರಾರಿನ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(ಬಿ) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಈ ಸಂಬಂಧವಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಅಗತ್ಯವಾಗುವ ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಲು;

- ಅಧಿಕಾರವನ್ನು ಹೊಂದಿರತಕ್ಕದ್ದು. [1][ಈ ಬಗ್ಗೆ ಒಂದು ಅನುಸರಣಾ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಸೇರಿಸಲಾಗಿದೆ.

**9. ಪ್ರಾಧಿಕಾರದ ಉಪ-ಸಮಿತಿ.-** (1) ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಕಾರ್ಯದರ್ಶಿಯು ಅಧ್ಯಕ್ಷರಾಗಿರುವ ಮತ್ತು ಪ್ರಾಧಿಕಾರದ ಸದಸ್ಯರುಗಳ ಪೈಕಿ ಐವರಿಗೆ ಮೀರದಂತೆ ಇತರ ಸದಸ್ಯರಿರುವ ಒಂದು ಉಪ-ಸಮಿತಿಯನ್ನು ರಚಿಸಬಹುದು.

(2) ಉಪ-ಸಮಿತಿಯು, ಪ್ರಾಧಿಕಾರವು ಪ್ರತ್ಯಾಯೋಜಿಸಿದಂಥ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ಉಪ-ಸಮಿತಿಯು ತಿಂಗಳಿಗೆ ಕನಿಷ್ಠಪಕ್ಷ ಒಂದು ಸಲವಾದರೂ ಸಭೆ ಸೇರತಕ್ಕದ್ದು ಮತ್ತು ವಿನಿಯಮಗಳಿಂದ ಉಪಬಂಧಿಸಬಹುದಾದಂತೆ ಅದರ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**10. ಕಾರ್ಯದರ್ಶಿಯ ನೇಮಕಾತಿ.-** [1][(1) ರಾಜ್ಯ ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ಮತ್ತು ಧರ್ಮಾದಾಯ ಇಲಾಖೆಯ ಕಾರ್ಯನಿರ್ವಹಣಾ ಅಧಿಕಾರಿಯನ್ನು ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(2) ಕಾರ್ಯದರ್ಶಿಯು, [1][ಮತ್ತು ಇತರ ಅಧಿಕಾರಿಗಳು][1] ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಸೇರಿಸಲಾಗಿದೆ.

(3) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಾನು ಯುಕ್ತವೆಂದು ಭಾವಿಸುವ ಅಂಥ ಅವಧಿಗೆ ಕಾರ್ಯದರ್ಶಿಗೆ ರಜೆಯನ್ನು ಮಂಜೂರು ಮಾಡಬಹುದು.

**11. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಕಾರ್ಯದರ್ಶಿಯು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಕಾರ್ಯದರ್ಶಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾಗಿರುವಂಥ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(ಎ) ಪ್ರಾಧಿಕಾರದ ನಿರ್ಣಯಗಳನ್ನು ಕಾರ್ಯಗತಗೊಳಿಸತಕ್ಕದ್ದು;

(ಬಿ) ಪ್ರಾಧಿಕಾರದ ವ್ಯವಹಾರಗಳನ್ನು ನಡೆಸತಕ್ಕದ್ದು ಮತ್ತು ಪತ್ರ ವ್ಯವಹಾರಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು;

(ಸಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದ ಅಂಥ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ನೆರವೇರಿಸಿ ಕಾರ್ಯಗತಗೊಳಿಸತಕ್ಕದ್ದು ಮತ್ತು ಆ ಬಗ್ಗೆ ಅವಶ್ಯವಾಗುವ ವೆಚ್ಚಗಳನ್ನು ಮಾಡತಕ್ಕದ್ದು;

(ಡಿ) ಪ್ರಾಧಿಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕದ್ದು;

(ಇ) ಪ್ರಾಧಿಕಾರದ ಲೆಕ್ಕಪತ್ರಗಳ ವ್ಯವಹಾರ ನಡೆಸತಕ್ಕದ್ದು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು;

(ಎಫ್) ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ಮೇಲೆ, ಕಾರ್ಯನಿರ್ವಹಣೆ, ಆಡಳಿತ ವಿಷಯಗಳ ಸಂಬಂಧದಲ್ಲಿ ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರ ಸೇವಾ ವಿಷಯಗಳು ಹಾಗೂ ಅವರ ವೇತನ ಮತ್ತು ಭತ್ಯೆಗಳನ್ನು ವಿನಿಯಮನಗೊಳಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಹೊಂದಿರತಕ್ಕದ್ದು;

(ಜಿ) ಪ್ರಾಧಿಕಾರದ ನಡವಳಿಗಳ ಸಂಕ್ಷಿಪ್ತ ಟಿಪ್ಪಣಿಗಳ ಮತ್ತು ಯಾವುದೇ ವಿವರಪತ್ರದ ಪ್ರತಿಯನ್ನು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದ ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು;

(ಎಚ್) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ತನಗೆ ಪ್ರದತ್ತವಾಗುವಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**12. ಪ್ರಾಧಿಕಾರದ ನೌಕರರು.-** (1) ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು, ಪ್ರಾಧಿಕಾರವು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯಕವೆಂದು ಭಾವಿಸುವಂಥ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

[1][ಪರಂತು, ರಾಜ್ಯ ಸರ್ಕಾರವು, ಈ ಅಧಿನಿಯಮದಡಿಯಲ್ಲಿ ನಿಯಮಗಳನ್ನು ರಚಿಸುವವರೆಗೆ, ಶ್ರೀ ಮಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಚಕರನ್ನು ಒಳಗೊಂಡಂತೆ ನೌಕರರ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ನಿಯಂತ್ರಣದಲ್ಲಿಯೇ ಮುಂದುವರೆಯತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

ಮತ್ತು ಪರಂತು, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ "ಎ" ಗುಂಪಿನ ಕಿರಿಯ ವೇತನ ಶ್ರೇಣಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೇಲೆ ಹಣಕಾಸು ಮತ್ತು ಲೆಕ್ಕಪತ್ರ ಸಲಹೆಗಾರರಾಗಿ ನೇಮಕ ಮಾಡತಕ್ಕದ್ದು.

(2) ಹಣಕಾಸು ಮತ್ತು ಲೆಕ್ಕಪತ್ರ ಸಲಹೆಗಾರರು ಕಾರ್ಯದರ್ಶಿಯ ಅಧೀನದಲ್ಲಿ ಕೆಲಸ ಮಾಡತಕ್ಕದ್ದು ಮತ್ತು ಅವರು ಹಣಕಾಸು ನಿಯಮಗಳನ್ನು ಪಾಲಿಸಿಕೊಂಡು ಬರುವಂತೆ ಹಾಗೂ ಪ್ರಾಧಿಕಾರದ ಹಣಕಾಸು ವ್ಯವಹಾರಗಳ ಬಗ್ಗೆ ವಾಸ್ತವಿಕವಾದ ಹಾಗೂ ನ್ಯಾಯವಾದ ಚಿತ್ರಣವನ್ನು ನೀಡುವಂತೆ ಲೆಕ್ಕಪತ್ರಗಳನ್ನು ಅಂದಂದಿನವರೆಗೆ ನಿರ್ವಹಿಸಿಕೊಂಡು ಬರುವಂತೆ ನೋಡಿಕೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೌಕರರ ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಕಾರ್ಯದರ್ಶಿಯು, ಪ್ರಾಧಿಕಾರದ ನೌಕರರಿಗೆ ಸಂಬಂಧಿಸಿದಂತೆ ನೇಮಕಾತಿ ಮತ್ತು ಶಿಸ್ತುಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

**13. ಪ್ರಾಧಿಕಾರದ ಅಡಿಯಲ್ಲಿನ ಸೇವೆಗೆ ಸಾಮಾನ್ಯ ಅನರ್ಹತೆಗಳು.**- ಯಾವೊಬ್ಬ ವ್ಯಕ್ತಿಯೂ, ಪ್ರಾಧಿಕಾರದ ಅಧಿಕಾರಿ ಅಥವಾ ನೌಕರನಾಗಿ ಅಲ್ಲದೆ, ಖುದ್ದಾಗಿ ಅಥವಾ ತನ್ನ ಪಾಲುದಾರನ ಮೂಲಕ ಅಥವಾ ತನ್ನ ಏಜಂಟನ ಮೂಲಕ ಪ್ರಾಧಿಕಾರದ ಯಾವುದೇ ಷೇರನ್ನು ಅಥವಾ ಪ್ರಾಧಿಕಾರವು ಮಾಡಿಕೊಂಡ ಇಲ್ಲವೇ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಪ್ರಾಧಿಕಾರದ ಅಡಿಯಲ್ಲಿನ ಯಾವುದೇ ನಿಯೋಜನೆಯಲ್ಲಿ ಹಿತಾಸಕ್ತಿಯನ್ನು ಹೊಂದಿದ್ದರೆ ಆತನು ಪ್ರಾಧಿಕಾರದ ಅಧಿಕಾರಿ ಅಥವಾ ನೌಕರನಾಗತಕ್ಕದ್ದಲ್ಲ ಅಥವಾ ಹಾಗೆ ಉಳಿಯತಕ್ಕದ್ದಲ್ಲ.

**14. ಪ್ರಾಧಿಕಾರದ ಸಭೆಗಳು.**- (1) ಕಾರ್ಯದರ್ಶಿಯು, ಅಧ್ಯಕ್ಷರ ಪೂರ್ವಾನುಮತಿಯೊಂದಿಗೆ ಮತ್ತು ಅಧ್ಯಕ್ಷರು ಯುಕ್ತವೆಂದು ಭಾವಿಸಬಹುದಾದ ಅಂಥ ಅವಧಿಗಳ ಅಂತರದಲ್ಲಿ ಮತ್ತು ಅಧ್ಯಕ್ಷರು ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಪ್ರಾಧಿಕಾರದ ಸಭೆಗಳನ್ನು ನಡೆಸತಕ್ಕದ್ದು:

ಪರಂತು, ಪ್ರಾಧಿಕಾರವು ಒಂದು ಕ್ಯಾಲೆಂಡರ್ ವರ್ಷದಲ್ಲಿ ಕನಿಷ್ಠ ಪಕ್ಷ [1][ನಾಲ್ಕು][1] ಬಾರಿಯಾದರೂ ಸಭೆ ಸೇರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಂದು ಸಭೆಯಲ್ಲೂ ಅಧ್ಯಕ್ಷರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದಾಗಿ ಅಧ್ಯಕ್ಷರಿಗೆ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, [1][ಸಭೆಯಲ್ಲಿ ಇಬ್ಬರೂ ಉಪಾಧ್ಯಕ್ಷರು ಉಪಸ್ಥಿತರಿದ್ದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು][1] ಅಧ್ಯಕ್ಷರನ್ನು ಒಳಗೊಂಡಂತೆ ಒಟ್ಟು ಸದಸ್ಯರ ಮೂರನೇ ಒಂದರಷ್ಟು ಸಭೆಯ ಕೋರಂ ಆಗಿರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(3) ಪ್ರಾಧಿಕಾರದ ತೀರ್ಮಾನಗಳನ್ನು, ಹಾಜರಿದ್ದು ಮತ ಹಾಕುವ ಸದಸ್ಯರ ಅವಿರೋಧ ಸಮ್ಮತಿಸೂಚಕ ಮತದ ಮೂಲಕ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ಮುಂದೆ ತೀರ್ಮಾನಕ್ಕಾಗಿ ಬಂದ, ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುವೇ ಭಿನ್ನಾಭಿಪ್ರಾಯಗಳಿದ್ದಲ್ಲಿ, ಕಾರ್ಯದರ್ಶಿಯು ಆ ವಿಷಯವನ್ನು ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯಗಳ ಬಗ್ಗೆ ರಾಜ್ಯಸರ್ಕಾರದ ತೀರ್ಮಾನವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

(4) ಕಾರ್ಯದರ್ಶಿಯು ಪ್ರಾಧಿಕಾರದ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು:

ಪರಂತು, ಪ್ರಾಧಿಕಾರದ ಯಾವುದೇ ನಿರ್ಣಯವು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಯಮಗಳ ಉಪಬಂಧಗಳನ್ನು ಅಥವಾ ರಾಜ್ಯಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಪ್ರಾಧಿಕರದ ಹಿತಾಸಕ್ತಿಗೆ ಅಥವಾ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಧಕ್ಕೆ ಉಂಟುಮಾಡುತ್ತದೆ ಅಥವಾ ಹಾನಿಕರವಾಗುತ್ತದೆಂದು ಕಾರ್ಯದರ್ಶಿಯು ಭಾವಿಸಿದರೆ, ಅವರು ನಿರ್ಣಯವನ್ನು ಅನುಮೋದಿಸಲಾದ ಹದಿನೈದು ದಿನಗಳ ಒಳಗಾಗಿ, ವಿಷಯದ ಬಗ್ಗೆ ಆದೇಶಗಳನ್ನು ಕೋರಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ಮತ್ತು ಕಾರ್ಯದರ್ಶಿಯು ಕಳುಹಿಸಿಕೊಟ್ಟ ಅಂಥ ವಿಷಯದ ಬಗ್ಗೆ ರಾಜ್ಯ ಸರ್ಕಾರವು ಆದೇಶವನ್ನು ನೀಡುವವರೆಗೆ, ಕಾರ್ಯದರ್ಶಿಯು ಆ ನಿರ್ಣಯವನ್ನು ಜಾರಿಗೆ ತರಲು ಬದ್ಧರಲ್ಲ.

(5) ಪ್ರಾಧಿಕಾರವು, ಈ ಅಧಿನಿಯಮದ ಮತ್ತು ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಮತ್ತು ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ಉಪಬಂಧಗಳಿಗೆ ಅಸಂಗತವಾಗದಂತೆ, ವಿನಿಯಮಗಳ ಮೂಲಕ ತನ್ನ ಸಭೆಗಳ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ, ಕಾರ್ಯವಿಧಾನಗಳನ್ನು ಗೊತ್ತುಪಡಿಸಬಹುದು.

**15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಊರ್ಜಿತವಾದುದೆಂದು ಪೂರ್ವಭಾವನೆ ಮಾಡುವುದು.-** ಸದಸ್ಯರಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ನ್ಯೂನತೆಯು, ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ನಡವಳಿಯು ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿದ್ದರೆ, ಅಂಥ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುತ್ತದೆಯೆಂದು ಭಾವಿಸತಕ್ಕದ್ದಲ್ಲ.

**16. ಸುತ್ತೋಲೆಯ ಮೂಲಕ ಪ್ರಾಧಿಕಾರದ ತೀರ್ಮಾನಗಳನ್ನು ಸೂಚಿಸುವುದು.- (1)** ಅಧ್ಯಕ್ಷನು, ಯಾವುದೇ ಪ್ರಕರಣವನ್ನು ಪ್ರಾಧಿಕಾರದ ಒಂದು ಸಭೆಯಲ್ಲಿ ಚರ್ಚೆಗೆ ತರುವುದಕ್ಕೆ ಬದಲಾಗಿ, ಆ ಬಗ್ಗೆ ಅವರ ಅಭಿಪ್ರಾಯ ಕೋರಿ

ಒಂದು ಟಿಪ್ಪಣಿಯನ್ನು ಪ್ರಾಧಿಕಾರದ ಸದಸ್ಯರ ನಡುವೆ ಪರಿಚಲನೆ ಮಾಡಿಸಲು ನಿರ್ದೇಶಿಸಬಹುದು. ಹಾಗೆ ಪರಿಚಲನೆ ಮಾಡಲಾದ ಟಿಪ್ಪಣಿಯಲ್ಲಿರುವ ಪ್ರಸ್ತಾವವನ್ನು ಎಲ್ಲ ಸದಸ್ಯರು ಅವಿರೋಧವಾಗಿ ಅನುಮೋದಿಸಿದರೆ ಅದನ್ನು ಪ್ರಾಧಿಕಾರದ ಸಮ್ಮತಿಸೂಚಕ ನಿರ್ಣಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ತೀರ್ಮಾನಕ್ಕಾಗಿ ಪರಿಚಲನೆ ಮಾಡಲಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ವ್ಯಕ್ತವಾದರೆ, ಕಾರ್ಯದರ್ಶಿಯು, ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಬಗ್ಗೆ ರಾಜ್ಯಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಭಿಪ್ರಾಯಕ್ಕಾಗಿ ಪರಿಚಲನೆ ಮಾಡಲಾದ ಸಂದರ್ಭಗಳಲ್ಲಿ ಯಾವೊಬ್ಬ ಸದಸ್ಯರು, ಟಿಪ್ಪಣಿಯಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದೊಳಗೆ ತಮ್ಮ ಅಭಿಪ್ರಾಯವನ್ನು ಕಾರ್ಯದರ್ಶಿಗೆ ತಿಳಿಸಲು ತಪ್ಪಿದರೆ, ಅಂಥ ಸದಸ್ಯರು ಸುತ್ತೋಲೆ ಕಳುಹಿಸಲಾದ ಟಿಪ್ಪಣಿಯಲ್ಲಿ ಒಳಗೊಂಡ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾರೆಂದು ಭಾವಿಸತಕ್ಕದ್ದು.

(3) 14ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಪ್ರಕರಣದ ಅಡಿಯಲ್ಲಿ ಪರಿಚಲನೆ ಮೂಲಕ ಕೈಗೊಂಡ, ಪ್ರಾಧಿಕಾರದ ತೀರ್ಮಾನಗಳಿಗೆ ಅನ್ವಯವಾಗತಕ್ಕದ್ದು.

(4) (1)ನೇ ಉಪಪ್ರಕರಣದ ಅಡಿಯಲ್ಲಿ ಸುತ್ತೋಲೆಗಾಗಿನ ಟಿಪ್ಪಣಿಯ ಅಂಶಗಳು, ನಿಯಮಿಸಬಹುದಾದಂತೆ ಇರತಕ್ಕದ್ದು.

**17. ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷರ ಅಧಿಕಾರ.**- (1) ಯಾವೊಂದು ವಿಷಯವು, 14ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಸಭೆ ಕರೆಯಲು ಅಗತ್ಯಪಡಿಸುವಷ್ಟು ಅಥವಾ 16ನೇ ಪ್ರಕರಣದ ಅಡಿಯಲ್ಲಿ ಸುತ್ತೋಲೆಯ ಮೂಲಕ ಪ್ರಾಧಿಕಾರವು ತೀರ್ಮಾನಿಸುವವರೆಗೂ ಕಾಯಲು ಸಾಧ್ಯವಾಗದಷ್ಟು ತುರ್ತು ಸ್ವರೂಪದ್ದಾಗಿದೆಯೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ ಅವರು, ತಾವು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ನೀಡಬಹುದು ಹಾಗೂ 14 ಮತ್ತು 16ನೇ ಪ್ರಕರಣದ ಅಡಿಯಲ್ಲಿ ಅದನ್ನು ಪ್ರಾಧಿಕಾರದ ತೀರ್ಮಾನಗಳ ರೀತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ಅಧ್ಯಕ್ಷನು ತೆಗೆದುಕೊಂಡ ಪ್ರತಿಯೊಂದು ತೀರ್ಮಾನವನ್ನು ಪ್ರಾಧಿಕಾರಕ್ಕೆ, ಅದರ ಮುಂದಿನ ಸಭೆಯಲ್ಲಿ ಅನುಸಮರ್ಥನೆಗಾಗಿ ವರದಿ ಮಾಡತಕ್ಕದ್ದು.

(3) ಅಧ್ಯಕ್ಷರ ತೀರ್ಮಾನವನ್ನು ಪ್ರಾಧಿಕಾರವು ಒಪ್ಪದಿದ್ದಲ್ಲಿ, ಅದನ್ನು ಸೂಕ್ತ ಆದೇಶಕ್ಕಾಗಿ, ಕಾರ್ಯದರ್ಶಿಯು ಸರ್ಕಾರಕ್ಕೆ ಕಳುಹಿಸತಕ್ಕದ್ದು.

## ಅಧ್ಯಾಯ – III

## ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆ

**18. ದೇವಸ್ಥಾನದ ಚರ ಮತ್ತು ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದ ಉಪಬಂಧ.–** [1][(1) ಮಲೈ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ನಿಯಂತ್ರಿಸುವ ಯಾವುದೇ ಪದ್ಧತಿ, ರೂಢಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಲ್ಲಿ ಅಥವಾ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ದೇವಸ್ಥಾನದ ಒಡೆತನ, ಆಡಳಿತ ಮತ್ತು ಆಭರಣಗಳು ಮತ್ತು ಹೊಣೆಗಾರಿಕೆಗಳನ್ನೂ ಒಳಗೊಂಡಂತೆ ಚರ ಮತ್ತು ಸ್ಥಿರ ಸ್ವತ್ತುಗಳ ಸಂಪೂರ್ಣ

ನಿರ್ವಹಣೆಯು, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಿಂದ ರಾಜ್ಯಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ತದನಂತರ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

[1][(2) 12ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಒಳಪಟ್ಟು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ದೇವಸ್ಥಾನದ ನೌಕರರ ನಿರ್ವಹಣೆಯು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(3) ರಾಜ್ಯ ಸರ್ಕಾರವು ತಾತ್ಕಾಲಿಕ ಉಪಬಂಧಗಳನ್ನು ಮಾಡುವುದು ಯುಕ್ತವೆಂದು ಅಭಿಪ್ರಾಯಪಟ್ಟಲ್ಲಿ, ಆದೇಶದ ಮೂಲಕ ಹಾಗೆ ಮಾಡಲು ರಾಜ್ಯ ಸರ್ಕಾರವು ಸಕ್ಷಮವಾಗಿರತಕ್ಕದ್ದು.

**19. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು.–** (1) ಪ್ರಾಧಿಕಾರವು, ಅದರ ರಚನೆಯಾದ ಮೇಲೆ, ಆದಷ್ಟು ಬೇಗನೆ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರವನ್ನು ಅಂತಾರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ ಮತ್ತು ಸಾಂಸ್ಕೃತಿಕ ಹಾಗೂ ಪ್ರವಾಸಿ ಕೇಂದ್ರವನ್ನಾಗಿ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಮತ್ತು ಇತರ ಅಧೀನ ದೇವತೆಗಳ ಪ್ರಚಾರದ ಕೇಂದ್ರವನ್ನಾಗಿ ಮಾಡಿ ಅಭಿವೃದ್ಧಿಗೊಳಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನವುಗಳನ್ನು ಒಳಗೊಂಡಿರಬಹುದು, ಎಂದರೆ:–

(ಎ) ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದ ಮತ್ತು ಪ್ರಧಾನ ದೇವತೆಗೆ ಸಂಬಂಧಪಟ್ಟ ಇತರ ದೇವಸ್ಥಾನಗಳ ನಿರ್ವಹಣೆಗಾಗಿ ಮರುಹೊದಿಕೆ (remantling) ಕಾರ್ಯಕ್ರಮಗಳು;

(ಬಿ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾದ ಭೂಮಿಯನ್ನು, ಭೂಸ್ವಾಧೀನ ಅಥವಾ ಖರೀದಿ, ವಿನಿಮಯದ ಮೂಲಕ ಅಥವಾ ಅನ್ಯಥಾ ಆರ್ಜಿಸುವುದಕ್ಕಾಗಿ ಪ್ರಸ್ತಾವಗಳು;

(ಸಿ) ಸಾರ್ವಜನಿಕ ಉದ್ಯಾನವನಗಳು, ಫಲಪುಷ್ಪ ತೋಟಗಳು ಅಥವಾ ಮೃಗಾಲಯಗಳು, ಕಾರಂಜಿ ಬನಗಳು, ಕೃತಕ ಜಲಪಾತಗಳು, ಕ್ರೀಡಾ ಉದ್ಯಾನವನಗಳು, ದೋಣಿ ವಿಹಾರ ಅಥವಾ ಇತರ ಜಲ ಕ್ರೀಡಾ ಸೌಲಭ್ಯವಿರುವ ಸರೋವರಗಳನ್ನು ಅಥವಾ ಇಂಥವೇ ಪ್ರವಾಸಿಗಳಿಗೆ ಆಕರ್ಷಣೆಯನ್ನುಂಟುಮಾಡುವಂಥ ಇತರ ಕೇಂದ್ರಗಳನ್ನು ನಿರ್ಮಿಸುವುದು;

(ಡಿ) ವಿವಿಧ ವರ್ಗದ ಪ್ರವಾಸಿಗರ ಅವಶ್ಯಕತೆ ಪೂರೈಸಲು ಛತ್ರಗಳು, ವಸತಿ-ಗೃಹಗಳು, ಕಾಟೇಜುಗಳು, ಹೋಟೆಲುಗಳು, ರೆಸ್ಟೋರೆಂಟುಗಳು ಮತ್ತು ಭೋಜನಾಲಯಗಳನ್ನು ನಿರ್ಮಿಸುವುದು;

(ಇ) ಅವಶ್ಯಕ ಸಾಲು ಅಂಗಡಿಗಳನ್ನು ಅಥವಾ ವಾಣಿಜ್ಯ-ಸಂಕೀರ್ಣಗಳನ್ನು ನಿರ್ಮಿಸುವುದು;

(ಎಫ್) ಆಯಕಟ್ಟಿನ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರಗಳ ಮತ್ತು ಧ್ಯಾನ ಮಂದಿರಗಳ ನಿರ್ಮಾಣ;

(ಜಿ) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸೌಕರ್ಯಗಳನ್ನು ಕಲ್ಪಿಸುವುದು;

(ಎಚ್) ಕಟ್ಟಡಗಳ ನಿರ್ಮಾಣ ಹಾಗೂ ಪುನರ್-ನಿರ್ಮಾಣವೂ ಸೇರಿದಂತೆ ಎಲ್ಲಾ ಅಥವಾ ಯಾವುದೇ ಭೂಮಿಯ ವಿನ್ಯಾಸ ಮತ್ತು ಮರು ವಿನ್ಯಾಸ;

(ಐ) ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಮತ್ತು ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು;

(ಜೆ) ಪ್ರಾಧಿಕಾರವು, ಸಾಧಾರಣವಾಗಿ ತನ್ನ ಯೋಜನಾ ಕಾರ್ಯಕ್ಕೆ ಅನುಕೂಲವಾಗುವಂತೆ ಮತ್ತು ಮುಖ್ಯವಾಗಿ ಉತ್ತಮ ನೀರು ಹರಿವಿನ ವ್ಯವಸ್ಥೆಯನ್ನು ಒದಗಿಸಲು, ಯಾವುದೇ ಭೂಮಿಯನ್ನು ಎತ್ತರಿಸುವುದು ಸೂಕ್ತವೆಂದು ಭಾವಿಸಿದರೆ ಅಂಥ ಭೂಮಿಯನ್ನು ಎತ್ತರಿಸುವುದು;

(ಕೆ) ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಥವಾ ಅದಕ್ಕೆ ಲಗತ್ತಾಗಿರುವ ಪ್ರದೇಶದಲ್ಲಿ ಉತ್ತಮ ಗಾಳಿ-ಬೆಳಕು ದೊರಕುವಂತೆ ಖಾಲಿ ಜಾಗಗಳನ್ನು ಬಿಡುವುದು;

(ಎಲ್) ಜನರ ವಾಸಕ್ಕೆ ಯೋಗ್ಯವಲ್ಲದ ಹಾಗೂ ಅಭಿವೃದ್ಧಿ ಯೋಜನೆಗೆ ತಕ್ಕದಲ್ಲದ ಎಲ್ಲ ಕಟ್ಟಡಗಳನ್ನು ಕೆಡವುವುದು;

(ಎಂ) ಅಡಚಣೆಯನ್ನುಂಟುಮಾಡುವ ಕಟ್ಟಡಗಳನ್ನು ಅಥವಾ ಕಟ್ಟಡಗಳ ಭಾಗಗಳನ್ನು ಕೆಡವುವುದು;

(ಎನ್) ಕಟ್ಟಡಗಳ ನಿರ್ಮಾಣ ಮತ್ತು ಪುನರ್‌ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆ;

(ಒ) 29ನೇ ಪ್ರಕರಣದಲ್ಲಿನ ಉಪಬಂಧಗಳಿಗೆ ಒಳಪಟ್ಟು, ಯೋಜನೆಯಲ್ಲಿ ಸೇರಿರುವ ಯಾವುದೇ ಸ್ವತ್ತನ್ನು ಮಾರಾಟ ಮಾಡುವುದು, ಬಾಡಿಗೆಗೆ ಕೊಡುವುದು, ಅಥವಾ ವಿನಿಮಯ ಮಾಡಿಕೊಳ್ಳುವುದು;

(ಪಿ) ಪ್ರಾಧಿಕಾರದ ನೌಕರರಿಗೆ ವಸತಿ ಸೌಲಭ್ಯವನ್ನು ಒದಗಿಸುವುದು;

(ಕ್ಯೂ) ನಿಲ್ದಾಣ ಸೌಲಭ್ಯಗಳೊಂದಿಗೆ ಸಂಪರ್ಕ ಮತ್ತು ಸಾಗಣೆ ಸೌಲಭ್ಯಗಳನ್ನು ಒದಗಿಸುವುದು;

(ಆರ್) ಅಭಿವೃದ್ಧಿ ಯೋಜನೆಯ ಭೌಗೋಳಿಕ ಪ್ರದೇಶದಲ್ಲಿ ಈಗಿರುವ ಮತ್ತು ಮುಂದುವರಿಸಲು ಅನುಮತಿಸಬಹುದಾದಂಥ ಮತೀಯ ಸಂಸ್ಥೆಗಳೊಂದಿಗೆ, ಅವು ಅಭಿವೃದ್ಧಿ ಯೋಜನೆಯ ಪರಿಕಲ್ಪನೆಗೆ ಸರಿಹೊಂದುತ್ತಿರುವವರೆಗೆ ಹೊಂದಾಣಿಕೆಗಳು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು;

(ಎಸ್) ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರವನ್ನು ಸಾಂಸ್ಕೃತಿಕ ಕೇಂದ್ರವಾಗಿ, ಯಾತ್ರಾ ಸ್ಥಳವಾಗಿ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಹಾಗೂ ಚರ್ಚಾ ಕೇಂದ್ರವಾಗಿ ಮಾಡುವ ದೃಷ್ಟಿಯಿಂದ ಹಾಗೂ ಶ್ರೀ ಮಲೈ ಮಹದೇಶ್ವರ ಸ್ವಾಮಿಗೆ ಸಂಬಂಧಪಟ್ಟ ಇತರ ಪ್ರಮುಖ ಸ್ಥಳಗಳನ್ನು ರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಉಪಬಂಧ ಕಲ್ಪಿಸುವುದು ಯುಕ್ತ ಮತ್ತು ಆನುಷಂಗಿಕವೆಂದು ಪ್ರಾಧಿಕಾರವು ಅಭಿಪ್ರಾಯ ಪಡುವ ಯಾವುದೇ ಇತರ ವಿಷಯ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಿದ್ಧಪಡಿಸಲಾದ ಅಭಿವೃದ್ಧಿ ಯೋಜನೆಯನ್ನು ಕಾರ್ಯದರ್ಶಿಯು [1][ಮಾಹಿತಿಗಾಗಿ][1] ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. [2][XXX][2]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.
2. 2016ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 14.07.2016ರಿಂದ ಬಿಟ್ಟುಬಿಡಲಾಗಿದೆ.

(3) [1][XXX][1] ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸುಗಳ ಮೇಲೆ ಕಾಲ ಕಾಲಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಯೋಜನೆಯಲ್ಲಿ ಮಾಡಬಹುದು.

1. 2016ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 14.07.2016ರಿಂದ ಬಿಟ್ಟುಬಿಡಲಾಗಿದೆ.

(4) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 29) ಉಪಬಂಧಗಳಿಗೆ ಅನುಸಾರವಾಗಿ, [1][XXX][1] ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಮತ್ತು ವೆಚ್ಚವನ್ನು ಮಾಡುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

1. 2016ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 14.07.2016ರಿಂದ ಬಿಟ್ಟುಬಿಡಲಾಗಿದೆ.

**20. ಪೂರಕ ಅಭಿವೃದ್ಧಿ ಕಾರ್ಯಗಳು.–** 19ನೇ ಪ್ರಕರಣದ ಅಡಿಯಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಿದ ತರುವಾಯ, ಪ್ರಾಧಿಕಾರವು, ಕಾಲಕಾಲಕ್ಕೆ, ತನ್ನದೇ ಆದ ಅಥವಾ ಸಾಲ ಪಡೆದ ಹಣಕಾಸಿನ ಸಂಪನ್ಮೂಲಗಳಿಂದ ಅಥವಾ ರಾಜ್ಯ ಸರ್ಕಾರದ ನಿಧಿಗಳಿಂದ ಯಾವುದೇ ಹೊಸ ಹೆಚ್ಚುವರಿ ಅಭಿವೃದ್ಧಿ ಯೋಜನೆಗಳನ್ನು ಮಾಡಬಹುದು ಅಥವಾ ಕೈಗೊಳ್ಳಬಹುದು.

**21. ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ನಿರ್ವಹಣೆ.-** ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ನಿರ್ವಹಣೆಗಾಗಿ ನಿಯಮಗಳ ಮೂಲಕ ಉಪಬಂಧಗಳನ್ನು ರಚಿಸತಕ್ಕದ್ದು. ಈ ಉಪಬಂಧಗಳಲ್ಲಿ, ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನದ ನಿರ್ವಹಣೆಯು ಸೇರಿದಂತೆ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಕ್ಕೆ ಬರುವ ಭಕ್ತರು, ಯಾತ್ರಿಕರು, ಪ್ರವಾಸಿಗರು ಮತ್ತು ಇತರ ಸಂದರ್ಶಕರು ಬಳಸಿಕೊಳ್ಳಬಹುದಾದ ವಿವಿಧ ಸೌಲಭ್ಯಗಳಿಗಾಗಿ ಅವರಿಂದ ವಸೂಲು ಮಾಡಬಹುದಾದ ದರಗಳು, ಶುಲ್ಕಗಳು ಅಥವಾ ಇತರ ವೆಚ್ಚಗಳ ಸಂಗ್ರಹಣೆ ಮತ್ತು ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರದ ಸ್ವತ್ತಿನ ಒಡೆತನದಲ್ಲಿರುವ ವ್ಯಕ್ತಿಗಳ ಅಥವಾ ಲೈಸನ್ಸುದಾರರಿಂದ ಲೈಸನ್ಸು ಶುಲ್ಕವನ್ನು ವಿಧಿಸುವ ಮತ್ತು ಯುಕ್ತವಾದಂಥ ಅಧಿಕಾರಗಳು ವಸೂಲು ಮಾಡುವ ಅಧಿಕಾರ ಮುಂತಾದ ಇತರ ವಿಷಯಗಳನ್ನು ಒಳಗೊಂಡಿರತಕ್ಕದ್ದು.

**22. ಅಧಿಕಾರಗಳ ಪ್ರತ್ಯಾಯೋಜನೆ.-** (1) 37ನೇ ಪ್ರಕರಣದಡಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೂಲಕ ಅದಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು, ಯಾವುದೇ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

(2) 38ನೇ ಪ್ರಕರಣದಡಿಯ ವಿನಿಯಮಗಳ ರಚನಾಧಿಕಾರವನ್ನು ಹೊರತುಪಡಿಸಿ, ಪ್ರಾಧಿಕಾರವು ವಿನಿಯಮಗಳ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೂಲಕ ಅದಕ್ಕೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಕಾರ್ಯದರ್ಶಿಗೆ ಅಥವಾ ಪ್ರಾಧಿಕಾರದ ಇತರ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು.

**23. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರದ ಆವರಣಕ್ಕೆ ಅನ್ವಯಿಸುವುದು.-** (1) ರಾಜ್ಯ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 32) ಆ ಅಧಿನಿಯಮವು ಸಾರ್ವಜನಿಕ ಆವರಣಗಳಿಗೆ ಸಂಬಂಧಿಸಿ ಅನ್ವಯಿಸುವಂತೆ ಪ್ರಾಧಿಕಾರಕ್ಕೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಅದು ಗುತ್ತಿಗೆಗೆ ತೆಗೆದುಕೊಂಡ ಆವರಣಕ್ಕೆ, ಅನ್ವಯಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಮೇಲ್ಕಂಡ ಅಧಿನಿಯಮವು ಮತ್ತು ಅದರಡಿ ರಚಿಸಿದ ನಿಯಮಗಳು ಈ ಮುಂದಿನ ಮಾರ್ಪಾಡುಗಳೊಡನೆ ಪ್ರಾಧಿಕಾರಕ್ಕೆ ಸೇರಿದ ಆವರಣಗಳಿಗೆ ಅನ್ವಯವಾಗತಕ್ಕದ್ದು, ಎಂದರೆ,-

(ಎ) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂತೆ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿ ಎಂದು ನೇಮಿಸಬಹುದು;

(ಬಿ) ಆ ಅಧಿನಿಯಮದಲ್ಲಿ ಮತ್ತು ಆ ನಿಯಮಗಳಲ್ಲಿ "ಸಾರ್ವಜನಿಕ ಆವರಣ" ಕ್ಕೆ ಮಾಡಿದ ಉಲ್ಲೇಖಗಳು ಪ್ರಾಧಿಕಾರದ ಆವರಣಗಳಿಗೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ 6, 8, 14, 16 ಮತ್ತು 17ನೇ ಪ್ರಕರಣಗಳಲ್ಲಿ "ರಾಜ್ಯ ಸರ್ಕಾರ"ಕ್ಕೆ ಮಾಡಿದ ಉಲ್ಲೇಖಗಳು ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

## ಅಧ್ಯಾಯ – IV

## ಹಣಕಾಸು ಮತ್ತು ಸ್ವತ್ತು

**24. ಪ್ರಾಧಿಕಾರದ ನಿಧಿ.–** (1) ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯ, ದೇಣಿಗೆಗಳು ಮತ್ತು ದಾನಗಳನ್ನು;

(ii) ಪ್ರಾಧಿಕಾರವು ಸಾಲ ಪಡೆದ ಮೊಬಲಗನ್ನು; ಮತ್ತು

(iii) ಯಾವುದೇ ಮೂಲದಿಂದಾಗಲೀ, ಪ್ರಾಧಿಕಾರವು ಅಥವಾ ಪ್ರಾಧಿಕಾರದ ಪರವಾಗಿ ಪಡೆದುಕೊಂಡ ಇತರ ಎಲ್ಲ ಮೊತ್ತಗಳನ್ನು,

–ಜಮೆ ಮಾಡತಕ್ಕದ್ದು:

[1][ಪರಂತು, ದೇಣಿಗೆಗಳು, ಕಾಣಿಕೆಗಳು, ಸೇವಾ ಶುಲ್ಕಗಳು ಮತ್ತು ಹುಂಡಿಯಲ್ಲಿ ದೇವರಿಗಾಗಿ ಸಲ್ಲಿಸಿದ ಇತರ ನೀಡಿಕೆಗಳನ್ನು ಪ್ರಾಧಿಕಾರದ ನಿಧಿಗೆ ಜಮಾಮಾಡತಕ್ಕದ್ದು ಮತ್ತು ಅದರಲ್ಲಿ ದೇವಸ್ಥಾನದ ನಿವ್ವಳ ಆದಾಯವನ್ನು ಪ್ರಾಧಿಕಾರವು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 17ನೇ ಪ್ರಕರಣದ ಅಡಿಯಲ್ಲಿ ಸೃಜಿಸಲಾದ ಸಾಮಾನ್ಯ ಸಂಗ್ರಹಣಾ ನಿಧಿಗೆ ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಂಥ ದರದಲ್ಲಿ ಕೊಡುಗೆ ನೀಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದ ಖಜಾನೆಯಲ್ಲಿ ಇರಿಸತಕ್ಕದ್ದು.

(4) ಪ್ರಾಧಿಕಾರದ ಕಾರ್ಯದರ್ಶಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿವೇತನವೇನಾದರೂ ಇದ್ದಲ್ಲಿ, ಅದನ್ನೂ ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**25. ನಿಧಿಯ ಬಳಕೆ.–** ನಿಧಿಯನ್ನು ಮತ್ತು ಪ್ರಾಧಿಕಾರವು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತನ್ನು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

**26. ಸರ್ಕಾರದಿಂದ ಅನುದಾನ.**- ರಾಜ್ಯ ಸರ್ಕಾರವು, ಪ್ರತಿ ವರ್ಷವೂ ಪ್ರಾಧಿಕಾರಕ್ಕೆ, ಪ್ರಾಧಿಕಾರವು ತನ್ನದೇ ಸಂಪನ್ಮೂಲಗಳಿಂದ ಸ್ವಯಂ ನಿರ್ವಹಣೆ ಮಾಡಿಕೊಳ್ಳುವ ಹಂತವನ್ನು ತಲುಪುವವರೆಗೆ, ಅದರ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತವನ್ನು ಅನುದಾನದ ರೂಪದಲ್ಲಿ ನೀಡತಕ್ಕದ್ದು.

**27. ಪ್ರಾಧಿಕಾರದ ಆಯವ್ಯಯ.**- (1) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ, ಪ್ರತಿ ವರ್ಷವೂ ಮುಂಬರುವ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ
ಅಂದಾಜನ್ನು ಸಿದ್ಧಪಡಿಸತಕ್ಕದ್ದು ಮತ್ತು ಮಂಜೂರಾತಿಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಪ್ರಾಧಿಕಾರವು ಅವಶ್ಯವಾದರೆ, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಪೂರಕ ಆಯವ್ಯಯ ಅಂದಾಜುಗಳನ್ನು ಸಹ ಸಿದ್ಧಪಡಿಸಬಹುದು.

(2) ರಾಜ್ಯ ಸರ್ಕಾರವು, ಈ ಆಯವ್ಯಯ ಅಂದಾಜುಗಳನ್ನು ಮತ್ತು ಪೂರಕ ಬಜೆಟ್ ಅಂದಾಜುಗಳನ್ನು, ಅವುಗಳಲ್ಲಿ ಮಾರ್ಪಾಟುಗಳನ್ನು ಮಾಡಿ ಅಥವಾ ಮಾಡದೆ ಅನುಮೋದಿಸತಕ್ಕದ್ದು.

(3) ಅತ್ಯಂತ ತುರ್ತು ಸಂದರ್ಭಗಳಲ್ಲಿ, ಕಾರ್ಯದರ್ಶಿಯು ಒಂದು ಹಣಕಾಸು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರದಂತೆ ವೆಚ್ಚವನ್ನು, ಅಂಥ ವೆಚ್ಚವನ್ನು (2) ನೇ ಉಪ-ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅನುಮೋದಿಸಿದ ವಾರ್ಷಿಕ ಅಥವಾ ಪೂರಕ ಆಯವ್ಯಯ ಅಂದಾಜಿನಲ್ಲಿ ಸೇರಿಸಿಲ್ಲದಿದ್ದಾಗ್ಯೂ, ಮಾಡಲು ಸಕ್ಷಮರಾಗಿರತಕ್ಕದ್ದು.

(4) ಕಾರ್ಯದರ್ಶಿಯು, ಒಂದು ಬಾರಿಗೆ, ಒಂದು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟು, ವೆಚ್ಚದ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ನಿಧಿಗಳ ಪುನರ್‌ವಿನಿಯೋಗ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

**28. ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ.**- (1) ಕಾರ್ಯದರ್ಶಿಯು, ನಿಯಮಿಸಬಹುದಾದ ಅಂಥ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸಿಕೊಂಡು ಬರುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕಪತ್ರಗಳ ತಃಖ್ತೆಯನ್ನು ತಯಾರಿಸತಕ್ಕದ್ದು.

(2) ಪ್ರಾಧಿಕಾರದ ಹಣಕಾಸು ವರ್ಷವು ಪ್ರತಿ ಕ್ಯಾಲೆಂಡರ್ ವರ್ಷದ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷದ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ಕೊನೆಗೊಳ್ಳತಕ್ಕದ್ದು.

(3) ಪ್ರಾಧಿಕಾರದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಣಾಧಿಕಾರಿಯು ವಾರ್ಷಿಕವಾಗಿ ಲೆಕ್ಕಪರಿಶೋಧನೆ ನಡೆಸತಕ್ಕದ್ದು. ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಸಮವರ್ತಿ ಮತ್ತು ವಿಶೇಷ ಲೆಕ್ಕಪರಿಶೋಧನೆಗಾಗಿಯೂ ಆದೇಶಿಸಬಹುದು.

(4) ಲೆಕ್ಕಪರಿಶೋಧಕನು, ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಪ್ರಾಧಿಕಾರವು, ಲೆಕ್ಕಪತ್ರಗಳ ವಾರ್ಷಿಕ ತಃಖ್ತೆಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗನೆ, ತನ್ನ ಸಭೆಯಲ್ಲಿ ಅದನ್ನು ಪರಿಶೀಲಿಸತಕ್ಕದ್ದು ಮತ್ತು ವಾರ್ಷಿಕ ಲೆಕ್ಕಪತ್ರಗಳ ತಃಖ್ತೆ ಹಾಗೂ ಲೆಕ್ಕಪರಿಶೋಧಕನ ವರದಿಯ ಪ್ರತಿಯನ್ನು, ಲೆಕ್ಕಪರಿಶೋಧಕನು ಮಾಡಿದ ಟೀಕೆಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆ ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ

ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಪ್ರಾಧಿಕಾರವು ಕೈಗೊಂಡ ಕ್ರಮದ ವಿವರಣೆಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕನ ವರದಿಯನ್ನು ಮತ್ತು (5) ನೇ ಉಪಪ್ರಕರಣದ ಅಡಿಯಲ್ಲಿ ತನಗೆ ಸಲ್ಲಿಸಲಾದ ಇತರ ದಸ್ತಾವೇಜುಗಳನ್ನು ಪರಿಶೀಲಿಸಿದ ನಂತರ, ಪ್ರಾಧಿಕಾರಕ್ಕೆ, ಅದು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**29. ವರದಿಗಳು.-** (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ, ತನ್ನ ಕಾರ್ಯನಿರ್ವಹಣೆ ಬಗ್ಗೆ ವಾರ್ಷಿಕ ವರದಿಯೊಂದನ್ನು ತಯಾರಿಸತಕ್ಕದ್ದು ಮತ್ತು 28ನೇ ಪ್ರಕರಣದ ಅಡಿಯ ಇತರ ವರದಿಗಳೊಂದಿಗೆ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ದಿನಾಂಕಕ್ಕಿಂತ ಮೊದಲು, ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯ ಅಂತರದಲ್ಲಿ, ನಿಯಮಿಸಲಾದ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

[1][(3) ರಾಜ್ಯ ಸರ್ಕಾರವು, ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ ಮತ್ತು ವಾರ್ಷಿಕ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಸೇರಿಸಲಾಗಿದೆ.

## ಅಧ್ಯಾಯ – V

## ಸಂಕೀರ್ಣ ವಿಷಯಗಳು

**30. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರತಕ್ಕದ್ದು.-** ಪ್ರಾಧಿಕಾರದ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರು ಎಂಬುದಾಗಿ ಭಾವಿಸತಕ್ಕದ್ದು.

**31. ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**32. ಕರ್ತವ್ಯ ನಿರ್ವಹಣೆಯಲ್ಲಿ ಲೋಪ.-** (1) ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ವಿಧಿಸಲಾದ ಯಾವುದೇ ಕರ್ತವ್ಯದ ನಿರ್ವಹಣೆಯನ್ನು ಪ್ರಾಧಿಕಾರವು ಮಾಡಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಆ ಕರ್ತವ್ಯದ ನಿರ್ವಹಣೆಗಾಗಿ ಅದು ಒಂದು ಅವಧಿಯನ್ನು ನಿಗದಿಪಡಿಸತಕ್ಕದ್ದು.

(2) ಕರ್ತವ್ಯ ನಿರ್ವಹಣೆಗಾಗಿ ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಪ್ರಾಧಿಕಾರವು ವಿಫಲವಾಗಿದೆ ಅಥವಾ ನಿರ್ಲಕ್ಷ್ಯ ತೋರಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಪ್ರಾಧಿಕಾರವನ್ನು ರದ್ದುಗೊಳಿಸುವುದು ಮತ್ತು ಅದನ್ನು ನಿಯಮಿಸಲಾದಂಥ ರೀತಿಯಲ್ಲಿ ಪುನಃ ರಚಿಸುವುದು ರಾಜ್ಯ ಸರ್ಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು.

(3) ಪ್ರಾಧಿಕಾರವನ್ನು ರದ್ದುಪಡಿಸಿದ ತರುವಾಯ ಮತ್ತು ಅದನ್ನು ಪುನಾರಚಿಸುವವರೆಗೆ ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ರಾಜ್ಯ ಸರ್ಕಾರ ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು.

**33 ಪ್ರಾಧಿಕಾರದ ವಿಘಟನೆ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ, ಪ್ರಾಧಿಕಾರವು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು:

ಪರಂತು, ಅಂಥ ಯಾವುದೇ ಘೋಷಣೆಯನ್ನು, ಆ ಅಭಿಪ್ರಾಯದ ಒಂದು ನಿರ್ಣಯವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಿ ಅವುಗಳು ಅದನ್ನು ಅನುಮೋದಿಸಿದ ಹೊರತು, ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ,-

(ಎ) ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಾಗತಕ್ಕ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾಗಿರತಕ್ಕದ್ದು.

(ಬಿ) ಪ್ರಾಧಿಕಾರದ ವಿರುದ್ಧ ಜಾರಿಮಾಡಬಹುದಾದ ಎಲ್ಲ ಹೊಣೆಗಳು, ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಿಯಾದ ಸ್ವತ್ತು, ನಿಧಿ ಮತ್ತು ಬಾಕಿಗಳಷ್ಟರ ಮಟ್ಟಿಗೆ ಶ್ರೀ ಮಲೈ ಮಹದೇಶ್ವರ ದೇವಸ್ಥಾನದ ವಿರುದ್ಧ ಜಾರಿಯಾಗಬಹುದಾಗಿರತಕ್ಕದ್ದು.

**34. ರಾಜ್ಯ ಸರ್ಕಾರದ ನಿಯಂತ್ರಣ.-** (1) ಪ್ರಾಧಿಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರವು, ಪ್ರಾಧಿಕಾರದ ಕಾರ್ಯದರ್ಶಿಯ ಅಥವಾ ಪ್ರಾಧಿಕಾರದ ಅಧೀನದ ಯಾವೊಬ್ಬ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಸರಿಯಾಗಿರುವಿಕೆ, ಕಾನೂನು ಬದ್ಧತೆ ಅಥವಾ ಔಚಿತ್ಯಗಳ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಅವುಗಳ ಬಗ್ಗೆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಆದೇಶಗಳನ್ನು ಹೊರಡಿಸಬಹುದು:

ಪರಂತು, ಸರ್ಕಾರದ ಆದೇಶದಿಂದ ಬಾಧಿತನಾದ ವ್ಯಕ್ತಿಗಳಿಗೆ ಸೂಕ್ತ ಕಾಲಾವಕಾಶವನ್ನು ನೀಡದ ಹೊರತು ಸರ್ಕಾರವು ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದ್ದಲ್ಲ ಅಥವಾ ರದ್ದು ಮಾಡತಕ್ಕದ್ದಲ್ಲ.

**35. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ.-** ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತಾನು ಅವಶ್ಯಕ ಮತ್ತು ಸಮಯೋಚಿತವೆಂದು ಅಭಿಪ್ರಾಯ ಪಡುವಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ಕೊಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**36. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮವು ಪ್ರಾರಂಭಗೊಳ್ಳುವುದಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಸದರಿ ಉಪಬಂಧಗಳ ಬದಲಾವಣೆಗಳ ಪರಿಣಾಮವಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ

ತೊಂದರೆಯ ನಿವಾರಣೆಗಾಗಿ, ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು.

(2) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉಪಬಂಧಗಳಿಗೆ ಅಸಂಗತವಾಗದಂತೆ, ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕ ಮತ್ತು ಯುಕ್ತವೆಂದು ಭಾವಿಸುವ ಅಂಥ ಉಪಬಂಧಗಳನ್ನು ರಚಿಸಬಹುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿನ ಯಾವುದೇ ಅಧಿಸೂಚನೆಯ ಮೂಲಕ ಮಾಡಲಾದ ಉಪಬಂಧಗಳು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಅಂಥ ಯಾವುದೇ ಅಧಿಸೂಚನೆಯನ್ನು, ಗೊತ್ತುಪಡಿಸಲಾದ ದಿನಕ್ಕಿಂತ ಮುಂಚಿನದಲ್ಲದ ಯಾವುದೇ ದಿನಾಂಕಕ್ಕೆ ಪೂರ್ವೋತ್ತರವಾಗಿರುವಂತೆ ಮಾಡಬಹುದು.

**37. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ
ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**38. ವಿನಿಯಮಗಳ ರಚನಾಧಿಕಾರ.-** ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು [1][37ನೇ ಪ್ರಕರಣದ ಅಡಿಯಲ್ಲಿ][1] ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

1. 2014ರ ಅಧಿನಿಯಮ ಸಂಖ್ಯೆ 36ರ ಮೂಲಕ ದಿನಾಂಕ: 6.09.2014 ರಿಂದ ಪ್ರತಿಯೋಜಿಸಲಾಗಿದೆ.

**39. ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಶ್ರೀ ಮಲೈಮಹದೇಶ್ವರಸ್ವಾಮಿ ದೇವಸ್ಥಾನವನ್ನು ನಿಯಂತ್ರಿಸುತ್ತಿರುವ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಯಾವುದೇ ಸಂಧಾನ, ಒಪ್ಪಂದ, ಯೋಜನೆ, ತೀರ್ಪು, ಡಿಕ್ರಿ ಅಥವಾ ಆದೇಶ ಅಥವಾ ಯಾವುದೇ ರೂಢಿ, ಆಚರಣೆಯಲ್ಲಿ ಏನೇ ಇದ್ದರೂ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು

ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಮತ್ತು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ಉಪಬಂಧಗಳು, ಈ ಅಧಿನಿಯಮವು ಪ್ರಾರಂಭವಾದ ತರುವಾಯವೂ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉಪಬಂಧಗಳ ಅಡಿಯಲ್ಲಿ ಅಧಿಸೂಚಿತ ಸಂಸ್ಥೆಗಳಾಗಿ ಉಳಿಯುವ, ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನ, ಮಲೈ ಮಹದೇಶ್ವರ ಬೆಟ್ಟಗಳ, ಆಡಳಿತ ಮತ್ತು ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಪ್ರಭಾವವುಳ್ಳವುದ್ದಾಗಿರತಕ್ಕದ್ದು.

**40. ಪ್ರಾಧಿಕಾರದ ರಚನೆಯ ಪರಿಣಾಮಗಳು.–** ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ರಡಿಯಲ್ಲಿ ಪ್ರಾಧಿಕಾರವು ರಚನೆಯಾದ ದಿನಾಂಕದಿಂದ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಅಂತಹ ಪ್ರಾಧಿಕಾರವನ್ನು ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಅಂತಹ ಪ್ರಾಧಿಕಾರವು ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರಕ್ಕೆ ರಚನೆಯಾದ ಸ್ಥಳೀಯ ಪ್ರಾಧಿಕಾರದಂತೆಯೇ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಈ ಅಧಿನಿಯಮದಡಿಯಲ್ಲಿ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

**ಕರ್ನಾಟಕ ಸರ್ಕಾರ**

**ಸಂಖ್ಯೆ: ಕಂಇ** 130 ಮುಅಬಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 11.09.2013.

**ಅಧಿಸೂಚನೆ**

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ರ 1ನೇ ಪ್ರಕರಣದ (3)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ದಿನಾಂಕ: 11.09.2013ನ್ನು ಸದರಿ ಅಧಿನಿಯಮದ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಸಿ.ಟಿ. ಜಯರಾಮೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ).

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 36**

(2014ರ ಸೆಪ್ಟೆಂಬರ್ ತಿಂಗಳ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014**

(2014ರ ಸೆಪ್ಟೆಂಬರ್ ತಿಂಗಳ ಎರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ, 37) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 3, 6, 8, 10, 12, 14, 18, 19, 24, 29, 38ಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.

**2016ರ ಕರ್ನಾಟಕ ಅಧಿನಿಯಮ ಸಂಖ್ಯೆ: 15**

(2016ರ ಜುಲೈ ತಿಂಗಳ ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2016**

(2016ರ ಜುಲೈ ತಿಂಗಳ ಹದಿನಾಲ್ಕನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ, 37) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು, ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 19ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.